CS (MAIN) Exam:2016

**M–ESC–CU–KND**

# KANNADA

**( Compulsory )**

| Time Allowed : Three Hours | Maximum Marks : 300 |
|---|---|

## QUESTION PAPER SPECIFIC INSTRUCTIONS

**Please read each of the following instructions carefully before attempting questions**

All the questions are to be attempted.

The number of marks carried by a question/part is indicated against it.

Answer must be written in KANNADA (Kannada script) unless otherwise directed in the question.

Word limit in questions, wherever specified, should be adhered to and if answered in much longer or shorter than the prescribed length, marks may be deducted.

Any page or portion of the page left blank in the Question-cum-Answer Booklet must be clearly struck off.

---

# ಕನ್ನಡ

( ಕಡ್ಡಾಯ ಪತ್ರಿಕೆ )

| ವೇಳೆ : ಮೂರು ಗಂಟೆ | ಗರಿಷ್ಠ ಅಂಕಗಳು : 300 |
|---|---|

## ಪ್ರಶ್ನೆ ಪತ್ರಿಕೆಯ ನಿರ್ದಿಷ್ಟ ಸೂಚನೆಗಳು

ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ.

ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಕಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ) ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಜಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

1. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 600 ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ: 100

(a) ಸಂಸ್ಕೃತಿ ಏಕೆ ಮುಖ್ಯವಾಗಿದೆ?

(b) ಅಚ್ಚುಕಟ್ಟಾದ (Smart Cities) ಪಟ್ಟಣಗಳು ಮತ್ತು ಅಶಿಸ್ತಿನಿಂದ (Unsmart) ಕೂಡಿದ ನಾಗರಿಕರು

(c) ನ್ಯಾಯಾಂಗದ ಕ್ರಿಯಾಶೀಲತೆ ವಿರುದ್ಧ ನ್ಯಾಯಾಂಗದ ಅಸೀಮಿತತೆ

(d) ಶಾಲಾ ವಿದ್ಯಾರ್ಥಿಗಳಲ್ಲಿ ನಮ್ಮ ಪರಂಪರೆಯನ್ನು ಗೌರವಿಸಿ ಪೋಷಿಸುವ ಗುಣವನ್ನು ಬೆಳೆಸುವ ಬಗೆ

2. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಕೊನೆಯಲ್ಲಿ ನೀಡಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. ನಿಮ್ಮ ಉತ್ತರಗಳು ನೇರ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿರಲಿ: 12×5=60

ಮಹಿಳೆಯು ಅರ್ಧ ಆಕಾಶವನ್ನು ಕರಗತ ಮಾಡಿಕೊಂಡಿರುವಳೆಂದು ಹೇಳಲಾಗುತ್ತದೆ. ನಾವು ಈ ವಿಷಯ ಕುರಿತು ಸಂಶೋಧನೆ ನಡೆಸಿ ಹೇಳುತ್ತೇವೆ. ಅಲ್ಲದೆ ಆಕೆಯು ಇದಕ್ಕಿಂತಲೂ ಹೆಚ್ಚಿಗೆ ಆಕ್ರಮಿಸಿಕೊಂಡು ಅಧಿಕಾರಿಣಿ ಆಗಿದ್ದಾಳೆ. ಆದರೆ ಎಲ್ಲ ದೇಶಗಳ, ಎಲ್ಲ ಕಾಲಗಳ ಇತಿಹಾಸವನ್ನು ಅವಲೋಕಿಸಿದಾಗ, ಪ್ರತಿಯೊಂದು ಸಂಸ್ಕೃತಿ, ಪರಂಪರೆ, ಪ್ರದೇಶ, ಧರ್ಮ, ಜಾತಿ, ಜನಾಂಗ ಹಾಗೂ ವರ್ಗಗಳಲ್ಲಿ ಮಹಿಳೆಗೆ ಗೌರವಯುತವಾದ ಸ್ಥಾನ ಸಿಕ್ಕಿಲ್ಲ. ಪುರುಷನ ಸಮಾನವಾದ ಸ್ಥಾನಮಾನಗಳು, ಗೌರವಗಳು ಆಕೆಗೆ ಎಲ್ಲ ದೇಶಗಳಲ್ಲಿ ಹಿಂದೆ ಮತ್ತು ಇಂದು ಸಿಕ್ಕಿಲ್ಲವೆಂಬುದನ್ನು ಗುರುತಿಸುವೆವು. ಮಹಿಳೆಯನ್ನು ವ್ಯವಸ್ಥಿತವಾದ ರೀತಿಯಲ್ಲಿ ಕೀಳಾಗಿ ಗಣಿಸುವ, ಆಕೆಗೆ ತಾರತಮ್ಯ ಮಾಡುವ ಸ್ಥಿತಿ ಸಮಾಜದಲ್ಲಿದೆ. ಆಹಾರ, ಶಿಕ್ಷಣ, ಉದ್ಯೋಗ, ಆರೋಗ್ಯ ಕಾಳಜಿ ಮತ್ತು ಅಭಿವೃದ್ಧಿಪರ ಕೆಲಸ-ಕಾರ್ಯಗಳಲ್ಲಿ ಭಾಗವಹಿಸುವಿಕೆ, ಇರುವಿಕೆ, ಚಿಂತನೆ, ಕನಸು ಮತ್ತು ವಾಸ್ತವ - ಈ ಎಲ್ಲದರಲ್ಲಿ ಮಹಿಳೆಯು ಪುರುಷನ ಸಮಾನವಲ್ಲವೆಂಬ ತಾರತಮ್ಯಭಾವ ಮುಂದುವರಿದಿದೆ. ಸರಿಯಾದ ರೀತಿಯಲ್ಲಿ ಹೇಳುವುದಾದರೆ ಮಹಿಳೆಯು ವಿಶ್ವದ ಅತಿದೊಡ್ಡ ಅಲ್ಪಸಂಖ್ಯಾತಳು ಎನ್ನಬಹುದು.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷರು ಮಹಿಳೆಯನ್ನು ಒಬ್ಬ ಸ್ವತಂತ್ರಜೀವಿ ಎಂದು ಪರಿಗಣಿಸದೆ, ಆಕೆಯ ಅಸ್ತಿತ್ವವನ್ನು ಗುರುತಿಸದೆ ಆಕೆಯೊಂದು ವಸ್ತುವೆಂದು ಭಾವಿಸಿದ್ದಾರೆ. ಅವರು ತಮ್ಮಷ್ಟಕ್ಕೆ ತಾವು ಸಂಪೂರ್ಣರು, ಸ್ವತಂತ್ರರು ಎಂದು ಭಾವಿಸಿರುವರು. ಮಹಿಳೆಯರನ್ನು ಇವರು ಗೌರವದಿಂದ, ಸ್ವಾಯತ್ತತೆಯ ದೃಷ್ಟಿಯಿಂದ ಮತ್ತು ಪುರುಷನಿಗೆ ಸಮಾನ ಗೌರವ ಹಾಗೂ ಸಮಾನ ಹಕ್ಕುಗಳನ್ನು ನ್ಯಾಯಯುತವಾಗಿ ಅವರೂ ಪಡೆಯಬಲ್ಲರು ಎಂಬುದನ್ನು ಅರ್ಥಮಾಡಿಕೊಳ್ಳರು. ಮಹಿಳೆಯರು ತಮ್ಮ ಅಧೀನದಲ್ಲಿರುವ ಒಂದು ಬಗೆಯ ವಸ್ತುವೆಂದು ತಿಳಿದು ವರ್ತಿಸುವರು. ಮಹಿಳೆ ಕೇವಲ ವಂಶಾಭಿವೃದ್ಧಿಯನ್ನು ಮುಂದುವರಿಸಲಿಕ್ಕಾಗಿ, ಪುರುಷರ ಸೇವೆ ಮಾಡಲಿಕ್ಕಾಗಿ ಮತ್ತು ಪುರುಷರಿಗೆ ಲೈಂಗಿಕ ತೃಪ್ತಿ ನೀಡಲು ಒಂದು ಸಾಧನವಾಗಿ ಇರುತ್ತಾಳೆಂದು ಪುರುಷರು ತಿಳಿದಿರುವರು. ಮಹಿಳೆಯು ಕೇವಲ ಯಾರದೋ ಮಗಳಾಗಿ, ಇನ್ನಾರದೋ ಪತ್ನಿಯಾಗಿ ಇಲ್ಲವೇ ತಾಯಿಯಾಗಿ ಸಾಂಸ್ಕೃತಿಕವಾಗಿ ಗುರುತಿಸಿಕೊಳ್ಳಬಲ್ಲಳು. ಇದರ ಹೊರತಾಗಿ ಅವಳಿಗೆ ಪ್ರತ್ಯೇಕವಾಗಿ ತನ್ನನ್ನು ಗುರುತಿಸಿಕೊಳ್ಳಲು ಆಸ್ಪದವಿಲ್ಲ. ವಿಭಿನ್ನ ದೃಷ್ಟಿಯಲ್ಲಿ ಅವಳು ಗುರುತಿಸಿಕೊಳ್ಳಲು ಯತ್ನಿಸಿದರೂ ಆಕೆಯನ್ನು ಪುರುಷರು ಕೀಳು ದೃಷ್ಟಿಯಿಂದ ಕಾಣುವುದುಂಟು.

ಏಕಾಂಗಿಯಾದ ಮಹಿಳೆಯು ಈ ವರ್ತುಲದಿಂದ ಬಿಡುಗಡೆ ಹೊಂದಿ ಹೊರಗೆ ಬಂದು ಜೀವಿಸತೊಡಗಿದಾಗ ಪುರುಷರು ಆಕೆಯನ್ನು ಕೀಳಾಗಿ ಗಣಿಸುವುದುಂಟು. ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಮಹಿಳೆಯು ಒಬ್ಬಳೇ ಇರದೆ ವಿವಾಹಿತಳಾಗಿ ಕುಟುಂಬದಲ್ಲಿರಬೇಕು. ಆದರೆ ಮದುವೆಯಾಗಿರದ ಅಥವಾ ವಿಧವೆಯಾಗಿರುವ, ಗಂಡನಿಂದ ಬಿಡುಗಡೆಗೊಂಡ ಸ್ತ್ರೀಯರಿಗೆ ರಕ್ಷಣೆ ಇರದು. ಪುರುಷನ ರಕ್ಷಣೆಯಲ್ಲಿರದ ಇಂಥ ಸ್ತ್ರೀಯರನ್ನು ಸಮಾಜವೂ ಒಳ್ಳೆಯ ದೃಷ್ಟಿಯಿಂದ ನೋಡದು. ಈಗಲೂ ಈ ತರದ ದೃಷ್ಟಿ ಹೆಚ್ಚಾಗುತ್ತ ಮುಂದುವರಿದಿದೆ. ಮಹಿಳೆಯು ಆಕಸ್ಮಾತ್ತಾಗಿ ರೋಗರುಜಿನಗಳಿಂದ, ಅಪಘಾತದಿಂದ ತನ್ನ

ಸಂಗಾತಿಯನ್ನು ಕಳೆದುಕೊಳ್ಳಬಹುದು. ಇಂಥ ಸ್ಥಿತಿಯಲ್ಲೂ ಅವಳು ಸ್ವಇಚ್ಛೆಯಂತೆ ಬದುಕಲು ಪುರುಷರು ಆಕೆಯನ್ನು ಬಿಡರು. ಆಕೆಯು ಪುರುಷನ ನೆರಳಾಗಿಯೇ ಬದುಕಬೇಕೆಂದು ಬಯಸುವರು.

ಅಭಿವೃದ್ಧಿ ಹೊಂದಿದ ಅನೇಕ ದೇಶಗಳಲ್ಲಿ ಮಹಿಳೆಯರು 60ರಿಂದ 80 ಪ್ರತಿಶತ ಆಹಾರವನ್ನು ಉತ್ಪಾದಿಸುವರು. ಅವರು ಉತ್ಪಾದಿಸಿದ ಆಹಾರ ವಿಶ್ವದ ಅರ್ಧದಷ್ಟು ಆಗಿರುತ್ತದೆಯೆಂಬ ಶ್ರೇಯಸ್ಸಿಗೆ ಅವರು ಭಾಜನರಾಗಿರುವರು. ಸಾಂಸ್ಕೃತಿಕವಾಗಿ ನೋಡಿದರೂ ಅವರೇ ಮನೆಗಳಲ್ಲಿ ಊಟವನ್ನು ಬಡಿಸುವವರಾಗಿರುತ್ತಾರೆ. ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಚರಣೆಗಳನ್ವಯ — ಮಹಿಳೆಯು ಕೆಲವು ಸಂದರ್ಭಗಳಲ್ಲಿ ಸ್ವತಃ ತಾನೇ ಕೊನೆಯದಾಗಿ ಮತ್ತು ಕಡಿಮೆ ಊಟವನ್ನು ಮಾಡುವುದು ವಿಶೇಷವಾಗಿದೆ. ಎಲ್ಲರಿಗೂ ಊಟಕ್ಕೆ ಬಡಿಸಿ ಉಳಿದುದನ್ನು ಆಕೆ ಸೇವಿಸುವಳು. ಅವಳೇ ಮನೆಯಲ್ಲಿ ಅಡುಗೆ ತಯಾರಿ ಮಾಡುವಳು. ಆ ಅಡಿಗೆಯನ್ನು ಕೆಲ ಸಂದರ್ಭಗಳಲ್ಲಿ ತಾನೇ ಊಟ ಮಾಡಳು. ಮತ್ತು ಊಟ ಮಾಡಲಿಕ್ಕೆ ಆಹಾರ ಮುಗಿದಿರಲೂ ಬಹುದು. ಇದನ್ನೆಲ್ಲ ಆಕೆ ಸಹಿಸಿಕೊಳ್ಳುವಳು. ಮನೆಯಲ್ಲಿ ಮಾಡಿದ ಅಡಿಗೆ ಸ್ವಲ್ಪವೇ ಇದ್ದರೂ ಅದರಲ್ಲಿಯೇ ಎಲ್ಲರಿಗೂ ಸಮನಾಗಿ ಬರುವಂತೆ ಆಕೆ ಹಂಚುವಳು. ತನಗೆ ಉಳಿಯದಿದ್ದರೂ ಹಾಗೆಯೇ ಇರುವಳು. ಸಾಮಾಜಿಕ ಬಂಧನ ಹಾಗೂ ಸ್ತ್ರೀ ಪುರುಷ ಭೇದಭಾವದ ನಡುವೆಯೂ ಮಹಿಳೆಯು ಏಕಾಂಗಿಯಾಗಿ ತನ್ನ ಕಾಲ ಮೇಲೆ ನಿಂತುಕೊಂಡು ಜಗತ್ತಿನಲ್ಲಿ ಸಂಘರ್ಷ ಮಾಡುತ್ತಾ ಬಾಳಬಲ್ಲವಳಾಗಿದ್ದಾಳೆ.

ಪುರುಷರೊಂದಿಗೆ ಮಹಿಳೆಯರನ್ನು ಹೋಲಿಸಿ ನೋಡಿದಾಗ ಸ್ತ್ರೀಯರ ಸಂಖ್ಯೆಯು ಕಡಿಮೆ ಇರುವುದು, ಇನ್ನುಳಿದ ದೇಶಗಳಂತೆ ಭಾರತದಲ್ಲಿಯೂ ಕಂಡುಬರುತ್ತದೆ. ಕಳೆದ ಶತಮಾನಗಳಿಂದ ಬಿಟ್ಟೂ ಬಿಡದೆ ದೇಶದ ಜನಸಂಖ್ಯೆಯಲ್ಲಿ ಮಹಿಳೆಯರ ಸಂಖ್ಯೆ ಇಳಿಮುಖವಾಗುತ್ತ ನಡೆದಿದೆ. 2001ರ ಜನಗಣತಿಯ ಪ್ರಕಾರ ಪುರುಷರ ಸಂಖ್ಯೆ 1000 (ಒಂದು ಸಾವಿರ) ಇದ್ದರೆ, ಮಹಿಳೆಯರ ಸಂಖ್ಯೆ 933 ಇರುತ್ತದೆ. ಪುರುಷರು ಹಾಗೂ ಹುಡುಗರಿಗೆ ಸಿಗುವ ಆರೋಗ್ಯ ಸುರಕ್ಷೆ, ಒಳ್ಳೆಯ ಆಹಾರ, ಮಹಿಳೆಯರಿಗೆ, ಹುಡುಗಿಯರಿಗೆ ಸಿಕ್ಕರೆ ಇವರೀರ್ವರ ಸಂಖ್ಯೆ ಸಮನಾಗುವುದು. 2001ರಲ್ಲಿ ಪುರುಷರಿಗಿಂತ ಮಹಿಳೆಯರು 3 ಕೋಟಿ 50 ಲಕ್ಷ ಕಮ್ಮಿ ಇದ್ದರು. ಈ ಅನುಪಾತವು 2011ರ ಜನಗಣತಿಯಲ್ಲಿ ಸ್ವಲ್ಪ ಸುಧಾರಣೆ ಕಂಡುಬಂದಿತು. ಅರ್ಥಾತ್ ಮಹಿಳೆಯರ ಸಂಖ್ಯೆ 940ಕ್ಕೇರಿತು. ತುಂಬಾ ಚಿಂತಾಜನಕ ವಿಷಯವೇನೆಂದರೆ 2001ರಲ್ಲಿ ಮತ್ತು ಇಲ್ಲಿಯವರೆಗೆ ಹುಡುಗರ ಜನನ ಸಂಖ್ಯೆಗಿಂತ ಹುಡುಗಿಯರ ಜನನ ಸಂಖ್ಯೆ ಕಡಿಮೆ ಇತ್ತು. ಅಂದರೆ ಜನನ ಪ್ರಮಾಣ 927ರಷ್ಟಿತ್ತು. 2011ರಲ್ಲಿ ಇನ್ನೂ ಕಡಿಮೆಯಾಗಿ 914 ಆಯ್ತು. ಈ ಅಂಕೆ-ಸಂಖ್ಯೆಗಳ ಹಿಂದಿರುವ ಗುಮಾನಿ ಏನೆಂದರೆ ನಮ್ಮ ಸಮಾಜವು ಹುಡುಗಿಯರಿಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತಾರತಮ್ಯ ದೃಷ್ಟಿಯಿಂದ ನೋಡಿದ್ದೇ ಕಾರಣವೆನ್ನಬೇಕು. ಹುಡುಗಿಯರನ್ನೂ, ಮಹಿಳೆಯರನ್ನೂ ನಮ್ಮ ಸಮಾಜವು ಕೀಳಾಗಿ ಗಣಿಸಿದುದಲ್ಲದೆ, ಹುಡುಗಿಯರ ಜನನದ ವಿಷಯದಲ್ಲೂ ತುಂಬಾ ತಾತ್ಸಾರ ವಹಿಸಿದುದು ಕಂಡುಬರುತ್ತದೆ. ಇದಕ್ಕಿಂತಲೂ ಹೆಚ್ಚಾಗಿ ಭಾರತೀಯ ಸಮಾಜದಲ್ಲಿ ನಿರಂತರವಾಗಿ ಲಕ್ಷಾಂತರ ಸಂಖ್ಯೆಯಲ್ಲಿ ಹುಡುಗಿಯರನ್ನು, ಮಹಿಳೆಯರನ್ನು ಸಾಯಿಸಲಾಗುತ್ತಿದೆ.

*(a)* ಜನಗಣತಿಯ ಅಂಕಿ ಅಂಶಗಳು ಹುಡುಗಿಯರ ಮತ್ತು ಮಹಿಳೆಯರ ಕುರಿತಾಗಿ ಏನು ಸಂದೇಶ ಕೊಡುತ್ತವೆ?

*(b)* ಊಟ ಮತ್ತು ಮಹಿಳೆಯ ವಿಷಯದಲ್ಲಿದ್ದ ಅಸಮಾನತೆ ಮತ್ತು ವಿಡಂಬನೆ ಏನಿದೆ?

*(c)* ಮಹಿಳೆ ಅರ್ಧ ಆಕಾಶವನ್ನು ವ್ಯಾಪಿಸಿದ್ದಾಳೆಂದು ತರ್ಕಿಸಿ ಹೇಳಿಕೆ ನೀಡಿದುದರ ಹಿಂದೆ ಇರುವ ಲೇಖಕರ ಅಭಿಪ್ರಾಯವೇನು?

*(d)* ಪುರುಷಪ್ರಧಾನ ಸಮಾಜದಲ್ಲಿ ಮಹಿಳೆ ಆತನ ಬಳಕೆಯ ವಸ್ತುವಾಗಿ ಹೇಗೆ ರೂಪ ಪಡೆದಿದ್ದಾಳೆ?

*(e)* ಲೇಖಕರ ಹೇಳಿಕೆಯನ್ವಯ ನಮ್ಮ ಸಮಾಜದಲ್ಲಿ ಒಬ್ಬೊಂಟಿ ಮಹಿಳೆ ಹೆಚ್ಚಾಗಿ ಆಕ್ರಮಣಕ್ಕೆ ಹೇಗೆ ಒಳಗಾಗಬಲ್ಲಳು?

3. ಈ ಕೆಳಗಿನ ಭಾಗವನ್ನು ಅದರ ಮೂರನೇ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ಬರೆಯಿರಿ. ಇದರ ಶೀರ್ಷಿಕೆಯನ್ನು ಸೂಚಿಸುವ ಅವಶ್ಯಕತೆಯಿಲ್ಲ. ಸಂಗ್ರಹವು ನಿಮ್ಮದೇ ಭಾಷೆಯಲ್ಲಿ ಇರಲಿ : 60

ನಮ್ಮಲ್ಲಿ ಅತ್ಯಧಿಕ ಜನರು ನಿಷ್ಠೆ, ಪ್ರಾಮಾಣಿಕ ಬದುಕನ್ನು ಪ್ರಶಂಸೆ ಮಾಡುವರು. ನಾವು ನಮ್ಮ ಕುಟುಂಬಕ್ಕೆ ನಿಷ್ಠರಾಗಿರುವುದನ್ನು, ನಮ್ಮ ಗೆಳೆಯರಿಗೆ ನಿಷ್ಠರಾಗಿರುವುದನ್ನು ಮತ್ತು ನಮ್ಮ ದೇಶಕ್ಕೆ ನಿಷ್ಠರಾಗಿರುವುದನ್ನು ನಾವು ಒಪ್ಪುತ್ತೇವೆ. ಪ್ರತಿಯೊಬ್ಬ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳನ್ನು ನಾವು ಈ ವಿಷಯದಲ್ಲಿ ಗೌರವಿಸುತ್ತೇವೆ ಮತ್ತು ನಿಷ್ಠೆ ಕುರಿತು ಮಾತಾಡುವಾಗ ಮೊದಲು ಇದರ ಅರ್ಥ ತಿಳಿಯುವ ಅಗತ್ಯವಿದೆ. ಜನ ಗಂಡಾಂತರ ಇಲ್ಲವೆ ಕಷ್ಟದಲ್ಲಿ ಇರುವಾಗ ಅವರಿಗೆ ಸಹಾಯ ಮಾಡುವುದು, ಮತ್ತು ಸ್ಥಿರವಾಗಿ ಎಲ್ಲಾ ಕಾಲಕ್ಕೂ ಅವರು ಕುಶಲದಿಂದಿರಲಿ ಎಂದು ಬಯಸುವುದು, ಈ ವಿಷಯ ತುಂಬಾ ಸ್ಪಷ್ಟವಾಗಿದೆ.

ವ್ಯಕ್ತಿಯೊಬ್ಬನು ಯಾವಾಗ ಅಪ್ರಾಮಾಣಿಕನಾಗಿ ನಡೆದುಕೊಳ್ಳುವನೋ, ಯಾವಾಗ ಆತ ತನ್ನ ಪಾಲಕರನ್ನು ಪೋಷಿಸದೆ ಹೊರಹಾಕುತ್ತಾನೋ ಆತ ಅಪ್ರಾಮಾಣಿಕ, ನಿಷ್ಠಾವಂತನಲ್ಲವೆಂಬುದು ಅರ್ಥವಾಗುವುದು. ಉದಾಹರಣೆಗಾಗಿ ಯೋಧನೊಬ್ಬ ಯಾವುದೇ ತಾರತಮ್ಯವಿಲ್ಲದೆ ತನ್ನ ದೇಶದ ವಿರುದ್ಧವೇ ಯುದ್ಧ ಮಾಡುತ್ತಾನೋ, ಸಹ ಯೋಧರನ್ನು ಯುದ್ಧದಲ್ಲಿ ಕೊಲ್ಲುತ್ತಾನೋ ಆತ ಪ್ರಾಮಾಣಿಕನಲ್ಲ, ನಿಷ್ಠನಲ್ಲ; ಬಹಳಷ್ಟು ಜನರು ಇಂಥ ಯೋಧರ ಕಾರ್ಯವನ್ನು ಒಪ್ಪುವುದಿಲ್ಲ.

ಆದಾಗ್ಯೂ ಅನೇಕ ಸಂದರ್ಭಗಳಲ್ಲಿ ವ್ಯಕ್ತಿಗಳು ಪ್ರಾಮಾಣಿಕರೋ, ಅಪ್ರಾಮಾಣಿಕರೋ, ನಿಷ್ಠರೋ ಅಲ್ಲವೋ ಎಂಬುದನ್ನು ನಿರ್ಣಯಿಸುವುದು ತುಂಬಾ ಕಷ್ಟಕರವಾದುದು. ಜಾಣ ಮಗು ತನ್ನ ಪಾಲಕರನ್ನು ವಿರೋಧಿಸಿ ತಾನು ಓದುವುದನ್ನು ನಿಲ್ಲಿಸಿ ಆರ್ಥಿಕವಾಗಿ ಪಾಲಕರಿಗೆ ಸಹಾಯ ಮಾಡಲೆಂದು ಕೆಲಸಕ್ಕೆ ತೊಡಗುತ್ತದೆ. ಆತ ತನ್ನನ್ನು ಓದಿಸಿದ, ಸಾಕಿ ಸಲುಹಿದ ತಂದೆ-ತಾಯಿಗಳಿಗೆ ಋಣ ತೀರಿಸಲು ದುಡಿಯುತ್ತಾನೆ. ಒಂದುವೇಳೆ ಆತ ಕಲಿಯುತ್ತ ಬಹಳ ವರ್ಷ ಹೋದರೆ ಆತ ಗಳಿಸಿದ ಜಾಣ್ಮೆ ಕೌಶಲ್ಯ ಮರೆತುಹೋಗುವುದು. ಕೆಲಸ ಮಾಡುತ್ತ ಹೋದರೆ ಆತನಲ್ಲಿರುವ ಜಾಣ್ಮೆಯ ಸದ್ಬಳಕೆಯಾಗುವುದು. ಮತ್ತೆ ಮುಂದೆ ಆತ ಅಧ್ಯಯನವನ್ನು ಮುಂದುವರಿಸಬಹುದು. ಈ ಮೂಲಕ ಆತ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬಹುದು. ಇಂಥ ನಿರ್ಣಯವನ್ನು ತೆಗೆದುಕೊಂಡ ಬಾಲಕ/ಬಾಲಕಿಯರ ಕ್ರಮವನ್ನು ಕೆಲವೊಮ್ಮೆ ತಿಳಿಗೇಡಿ ಜನರು ಖಂಡಿಸುವರು. ಇಂಥ ಸಂದರ್ಭದಲ್ಲಿ ಆ ಬಾಲಕ-ಬಾಲಕಿಯರಿಗೆ ತಿಳಿಯದೇ ಆಡಿದ ಮತ್ತು ಖಂಡನೆ ಮಾಡಿದ ಜನರ ಬದಲಾಗಿ ಅವರ ಕ್ರಮವನ್ನು ಪ್ರೋತ್ಸಾಹಿಸುವ, ಪ್ರೇರಣೆ ನೀಡುವ ಜನರ ಅಗತ್ಯವಿರುತ್ತದೆ. ಮತ್ತೊಂದೆಡೆ, ಕೆಲವು ವಿಶಿಷ್ಟ ಸನ್ನಿವೇಶಗಳಲ್ಲಿ ಬಾಲಕನ ಪಾಲಕರು ತುಂಬಾ ಬಡವರಿರುತ್ತಾರೆ. ಇಂಥ ವೇಳೆಯಲ್ಲಿ ಅವರು ತಮ್ಮ ಮಗನಿಗೆ ನಿಷ್ಠರಾಗದೆ, ಸಹಾಯ ನೀಡದೆ ಆತನನ್ನು ಹೊರಗಡೆ ಕೆಲಸಕ್ಕೆ ಕಳಿಸದೆ ಅಸಹಾಯಕರಾಗಿರುವರು. ಹೀಗಿದ್ದರೂ ಮುಂದೊಂದು ದಿನ ಆ ಬಾಲಕ ತನ್ನ ಸ್ವಪ್ರಯತ್ನದಿಂದ ಜಯಶಾಲಿಯಾಗಬಹುದು. ಆಗ ಆತ ತನ್ನ ಯುವಾವಸ್ಥೆಯ ಬಗ್ಗೆ ಖೇದವನ್ನು ವ್ಯಕ್ತಪಡಿಸುವುದುಂಟು.

ಒಮ್ಮೊಮ್ಮೆ ಈ ಸಮಸ್ಯೆ ಇನ್ನೂ ದೊಡ್ಡದಾಗಬಹುದು, ಕೆಲವೇಳೆ ವ್ಯಕ್ತಿಯೋರ್ವನ ಸಮಸ್ಯೆಗಳು ದೇಶದೊಂದಿಗೆ ಸೇರಿಕೊಂಡು ವಿಭಿನ್ನ ರೂಪವನ್ನು ತಾಳಬಹುದು. ಜನರ ಗುಂಪು ನಮ್ಮ ದೇಶವನ್ನು ಪ್ರಾಮಾಣಿಕವಾಗಿ ಪ್ರೀತಿಸುತ್ತಿರುತ್ತದೆ. ಮತ್ತು ಅದರ ಉತ್ಕರ್ಷ ಬೆಳವಣಿಗೆಯನ್ನು ಕುತೂಹಲದಿಂದ ನೋಡುತ್ತಿರುತ್ತದೆ. ಈ ಗುಂಪು ಒಮ್ಮೊಮ್ಮೆ ತಮ್ಮ ಸರ್ಕಾರದ ವಿರುದ್ಧವೇ ಬಂಡೇಳಬಹುದು. ಅದರ ವಿರುದ್ಧ ಸಮರ ಸಾರಬಹುದು. ಹೀಗೇಕೆ ಮಾಡುತ್ತದೆಯೆಂದರೆ ಆ ಗುಂಪಿಗೆ ಸರ್ಕಾರವು ದೇಶಕ್ಕೆ ಒಳಿತನ್ನು ಮಾಡುತ್ತಿಲ್ಲ ಎಂದು ಅನ್ನಿಸುತ್ತದೆ. ಅದಕ್ಕಾಗಿ ಅನಿವಾರ್ಯವಾಗಿ ಆ ಸರ್ಕಾರವನ್ನು ಕಿತ್ತುಹಾಕಲು ಅದು ಮುಂದಾಗುತ್ತದೆ. ಆಗ ಸರ್ಕಾರವು ತುರ್ತಾಗಿ ಇಂಥವರನ್ನು 'ಬಂಡುಕೋರರು', 'ದೇಶ ವಿರೋಧಿಗಳು' ಎನ್ನುತ್ತದೆ. ಇದರಲ್ಲಿ ಮೊದಲ ಪದ ಸರಿ ಇರಬಹುದು. ಎರಡನೆಯದು ಹಾಗಿರಲಾರದು. ಇಂಥವರು ಸರ್ಕಾರಕ್ಕಿಂತ, ಜನರ ಅಭಿರುಚಿ ಬೇಕು-ಬೇಡಗಳನ್ನು ಅರಿತು ನಿಷ್ಠರಾಗಿ ನಡೆದುಕೊಳ್ಳುತ್ತಾರೆ, ಸರ್ಕಾರಕ್ಕೆ ನಿಷ್ಠರಾಗರು. ದುರ್ದೈವದಿಂದ ಇಂಥವರು

(ಬಂಡುಕೋರರು) ದೇಶದ ಅಭಿವೃದ್ಧಿ ದೃಷ್ಟಿಯಿಂದ ನಿಷ್ಠರಾಗಿರುತ್ತಾರೋ, ಸ್ವಾರ್ಥ ಹಿತಾಸಕ್ತಿಯಿಂದ ಬಂಡುಕೋರರಾಗಿರುತ್ತಾರೋ ಎಂಬುದು ತಿಳಿಯದು. ಕೊನೆಗೊಮ್ಮೆ ಸತ್ಯವು ಪ್ರಕಟಗೊಳ್ಳುವುದು. ಒಂದುವೇಳೆ ಈ ರೀತಿ ಬಂಡೆದ್ದ ಬಂಡುಕೋರರಿಗೆ ಜಯ ಲಭಿಸಿದರೆ ಅವರು ಹೊಸ ಸರ್ಕಾರವನ್ನು ರಚಿಸುವರು. ಆಗ ಇವರು ದೇಶದ ಎಲ್ಲ ಜನರೊಂದಿಗೆ ಮತ್ತು ತಮ್ಮನ್ನು ವಿರೋಧಿಸಿದ ರಾಜಕೀಯ ವಿರೋಧಿಗಳೊಂದಿಗೂ ಬೆರೆತು ಇರಬೇಕಾಗುವುದು. ಆಗ ಇವರು ಎಲ್ಲರಿಗೂ ಮಾತಾಡುವ, ಹಾಗೂ ಅಭಿಪ್ರಾಯವನ್ನು ಸ್ವತಂತ್ರವಾಗಿ ಮಂಡಿಸುವ ಹಕ್ಕು ಕೊಡಬೇಕಾಗುವುದು. ಮತ್ತು ಜನತೆಯ ಬೆಂಬಲವನ್ನು ಗಳಿಸುವತ್ತ ಇವರು ಲಕ್ಷ್ಯ ಹರಿಸುವರೋ? ಇಲ್ಲವೇ ಇವರು ತಮ್ಮ ಶಕ್ತಿಯನ್ನು ಬಳಸಿ ವೈರಿಗಳನ್ನು ನಾಶ ಮಾಡುತ್ತಾರೋ? ಒಂದುವೇಳೆ ಇವರು ಮೊದಲಿನದನ್ನು ಮಾಡಿದರೆ ಇವರು ನಿಜವಾಗಿ ದೇಶಕ್ಕೆ ನಿಷ್ಠರಾದವರೇ ಹೊರತು ತಮ್ಮ ಗುಂಪಿಗೆ ಅಷ್ಟೇ ಅಲ್ಲ ಎಂದು ನಾವು ತಿಳಿಯಬಹುದು. ಒಂದುವೇಳೆ ಇವರು ಅನಂತರದ್ದನ್ನು ಮಾಡಿದರೆ ಇವರು ಸ್ವಾರ್ಥಿಗಳು, ದೇಶ ಮತ್ತು ಸರ್ಕಾರಕ್ಕೆ ನಿಷ್ಠರಾದವರಲ್ಲವೆಂದು ತಿಳಿಯುವೆವು. ಈ ಬೋಧನೆ ನಮಗೆ ಅತ್ಯಂತ ತಡವಾಗಿ ತಿಳಿಯುತ್ತದೆ.

4. ಈ ಕೆಳಗಿನ ಗದ್ಯಭಾಗವನ್ನು ಇಂಗ್ಲೀಷಿಗೆ ಅನುವಾದ ಮಾಡಿರಿ : 20

ಒಬ್ಬ ಅಮೀರನು ತನ್ನ ಹಡಗಿನಲ್ಲಿ ಸಮುದ್ರಯಾತ್ರೆಯನ್ನು ಮಾಡುತ್ತಿರುವ ವೇಳೆಯಲ್ಲಿ ದೊಡ್ಡ ಬಿರುಗಾಳಿ ಬೀಸಿತು. ಆ ಹಡಗಿನಲ್ಲಿ ಗುಲಾಮನೊಬ್ಬ ಮೊದಲಬಾರಿಗೆ ಕುಳಿತು ಸಮುದ್ರಯಾನವನ್ನು ಮಾಡುತ್ತಿದ್ದ. ಆತ ಭೀಕರವಾಗಿ ಬೀಸಿದ ಬಿರುಗಾಳಿಗೆ ಹೆದರಿ ಚೀರುತ್ತ ಅಳತೊಡಗಿದ. ಇದು ಕೆಲ ಹೊತ್ತಿನ ವರೆಗೆ ನಡೆಯಿತು. ಮತ್ತು ಯಾರೂ ಆತನಿಗೆ ಸಮಾಧಾನ ಹೇಳಿ ಆತ ಅಳುವುದನ್ನು ತಡೆಯಲಿಲ್ಲ. ಸಿಟ್ಟುಗೊಂಡ ಅಮೀರನು ''ಇಲ್ಲಿ ಈ ನೀಚ ಹೇಡಿಯ ಅಳುವನ್ನು ತಡೆಯಲು ಯಾರೂ ಏಕೆ ಪ್ರಯತ್ನಿಸಲಿಲ್ಲ'' ಎಂದು ಕೇಳಿದನು.

ಒಬ್ಬ ದಾರ್ಶನಿಕನೂ ಈ ಹಡಗಿನಲ್ಲಿ ಪಯಣಿಸುತ್ತಿದ್ದನು. ಅವನು ಅಮೀರನಿಗೆ ''ನಾನು ಈ ಮನುಷ್ಯ ಅಳುವುದನ್ನು ತಡೆಯುವೆನು. ಮಹಾಶಯರೆ, ತಾವು ನನಗೆ ಈ ವಿಷಯದಲ್ಲಿ ಸಂಪೂರ್ಣ ಅನುಮತಿ ನೀಡಿರಿ'' ಎಂದು ಬೇಡುವನು. ಆಗ ಅಮೀರನು ''ನಿಮಗೆ ಅನುಮತಿಯನ್ನು ನೀಡುತ್ತಿರುವೆ, ಮುಂದುವರಿಯಿರಿ'' ಎಂದನು.

ದಾರ್ಶನಿಕನು ಸ್ವತಃ ಕೆಲವು ನಾವಿಕರನ್ನು ಕರೆದು ಈ ಗುಲಾಮನನ್ನು ಸಮುದ್ರದಲ್ಲಿ ಎಸೆದುಬಿಡಿ ಎಂದು ಆದೇಶ ನೀಡಿದನು. ಆಗ ನಾವಿಕರು ಯಾವುದೇ ಉಪಾಯವಿಲ್ಲದೆ ಹಾಗೆಯೇ ಮಾಡಿದರು. ಆಗ ಆ ಗುಲಾಮನು ಭಯಭೀತನಾಗಿ ಚೀರತೊಡಗಿದ ಮತ್ತು ಆತ ತನ್ನ ಕೈ ಕಾಲುಗಳನ್ನು ಬೀಸುತ್ತಿದ್ದ. ಕೆಲವು ಕ್ಷಣಗಳಲ್ಲಿ ದಾರ್ಶನಿಕನು ನಾವಿಕರಿಗೆ ಆ ಗುಲಾಮನನ್ನು ತಿರುಗಿ ಹಡಗಿನಲ್ಲಿ ಎತ್ತಿಕೊಂಡು ಕೂಡ್ರಿಸಿರಿ ಎಂದ. ಹಡಗನ್ನೇರಿ ಕುಳಿತೊಡನೆಯೇ ಸುಸ್ತಾಗಿದ್ದ ಹಾಗೂ ಭಯಗೊಂಡ ಆ ಗುಲಾಮನು ಸುಮ್ಮನಾಗಿಬಿಟ್ಟನು. ಅಮೀರನು ಆಕಸ್ಮಿಕವಾಗಿ ನಡೆದ ಈ ಬಗೆಯ ಪರಿವರ್ತನೆಯನ್ನು ಕಂಡು ಚಕಿತನಾದನು. ಆತನು ಇದಕ್ಕೆ ಕಾರಣವೇನೆಂದು ದಾರ್ಶನಿಕನನ್ನು ಕೇಳಿದನು. ಆಗ ದಾರ್ಶನಿಕನು - ಸುಖದ ಸುಪ್ಪತ್ತಿಗೆಯಲ್ಲಿ ಕಾಲ ಕಳೆಯುವ ನಮಗೆ ದುಃಖದ ಅರಿವು, ಸಂಕಷ್ಟಗಳ ಅರಿವು ಎಂದಿಗೂ ಆಗದು. ಸ್ವತಃ ನಾವೇ ಕಷ್ಟದಲ್ಲಿ ಸಿಲುಕಿಕೊಂಡಾಗ ಮಾತ್ರ ನಮಗೆ ಆಗ ಅದರ ಅರಿವಾಗುವುದು ಎಂದು ಹೇಳುವನು.

5. ಈ ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಅನುವಾದಿಸಿರಿ : 20

Man has always been fascinated by dreams. He has always tried to find explanations for his dreams. Perhaps dreams tell us about the future or the past, perhaps they tell us about our deepest fears and hopes. I don't know. Today, I want to give you a completely different explanation. But before I do so, I must give you

one or two facts about dreams. First of all, everybody dreams. You often hear people say, 'I never dream', when they mean, 'I can never remember my dreams'. When we dream, our eyes move rapidly in our sleep as if we were watching a moving picture, following it with our eyes. This movement is called REM, that is Rapid Eye Movement. REM sleep is the sleep that matters. Experiments have proved that if we wake people throughout the night during REM, they will feel exhausted the next day. But they won't feel tired at all if we take them at times when they are not dreaming. So the lesson is clear : it is dreaming that really refreshes us, not just sleep. We always dream more if we have had to do without sleep for any length of time.

If that is the case, how can we explain it? I think the best parallel I can draw is with computers. After all, a computer is a very primitive sort of brain. To make a computer work, we give it a programme. When it is working, we can say it is 'awake'. If ever we want to change the programme, that is to change the information we put into the computer, what do we do? Well, we have to stop the computer and put in a new programme or change the old programme.

**6.** *(a)* ಈ ಕೆಳಗಿನ ಕನ್ನಡ ಪದಗಳ ಸಂಸ್ಕೃತ ಮೂಲಸ್ವರೂಪ ಏನು? 2×5=10

*(i)* ಸೆಟ್ಟಿ

*(ii)* ಜಾತ್ರೆ

*(iii)* ಅಜ್ಜ

*(iv)* ಕಂಬ

*(v)* ದಯೆ

*(b)* ಈ ಕೆಳಗಿನವುಗಳ ಸಂಧಿಯ ಸ್ವರೂಪವನ್ನು ಗುರುತಿಸಿರಿ : 2×5=10

*(i)* ಹಣದಾಸೆ

*(ii)* ಹಳ್ಳಿಯಲ್ಲಿ

*(iii)* ಹಸುವೆಲ್ಲಿ

*(iv)* ಮಳೆಗಾಲ

*(v)* ನೀರಿಲ್ಲ

*(c)* ಈ ಕೆಳಗಿನವುಗಳ ಛಂದೋ ಸ್ವರೂಪವನ್ನು ವಿವರಿಸಿರಿ : 2×5=10

*(i)* ಮಂದಾನಿಲ ರಗಳೆಯ ಮಾತ್ರಾಗಣದ ಸ್ವರೂಪ ಏನು?

*(ii)* ವಾರ್ಧಕ ಷಟ್ಪದಿಯ ಮಾತ್ರೆಗಳ ವಿವರ ಕೊಡಿರಿ.

*(iii)* ಏಳೆಯ ಲಕ್ಷಣವನ್ನು ನಿರೂಪಿಸಿರಿ.

*(iv)* ಸಾಂಗತ್ಯದಲ್ಲಿ ಎಷ್ಟು ಗಣಗಳಿರುತ್ತವೆ?

*(v)* ಸರಳ ರಗಳೆಯ ಲಕ್ಷಣವೇನು?

(*d*) ಈ ಕೆಳಗಿನವುಗಳನ್ನು ಹೇಳಿದ ಕವಿ/ವ್ಯಾಕರಣಕಾರ/ಮೀಮಾಂಸಕರನ್ನು ಗುರುತಿಸಿರಿ : 2×5=10

(*i*) ಮನುಷ್ಯಜಾತಿ ತಾನೊಂದೆ ವಲಂ

(*ii*) ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

(*iii*) ಕನ್ನಡದೊಳಗೇಕ ಬಹುತ್ವಂ ದ್ವಿವಚನಮುಚಿತದೆ ಬರ್ಕುಂ

(*iv*) ರಮಣೀಯಾರ್ಥ ಪ್ರತಿಪಾದಕಃ ಶಬ್ದಃ ಕಾವ್ಯಂ

(*v*) ವಾಕ್ಯಂ ರಸಾತ್ಮಕಂ ಕಾವ್ಯಂ

★★★